ಸಿವಿಲ್ ನ್ಯಾಯಾಧೀಶರು ಮತ್ತು ಪ್ರ ದ ನ್ಯಾದಂ. ರವರ ನ್ಯಾಯಾಲಯ,

ಪೊನ್ನಂಪೇಟೆ

**ಸಿ.ಸಿ. ನಂ. 679/2022** **ಪ್ರಾ.ಸಾ – 1**

**ಚಾ.ಸಾ – 1**

ದಿನಾಂಕಃ **17.06.2025** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

| | | |
|---|---|---|
| ಸಾಕ್ಷಿಯ ಹೆಸರು | : | ಜೀವನ್ |
| ತಂದೆಯ ಹೆಸರು | : | ನಾಣಯ್ಯ |
| ವಯಸ್ಸು | : | 35 ವರ್ಷ |
| ಉದ್ಯೋಗ | : | ವ್ಯಾಪಾರ |
| ವಾಸ ಸ್ಥಳ | : | ಬೆಂಗಳೂರು |

ಮುಖ್ಯ ವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ-

ಚಾಸಾ 2 ನನ್ನ ಹೆಂಡತಿ. ದಿ. 26.12.2021 ರಂದು ಗೋಣಿಕೊಪ್ಪದಲ್ಲಿ Jayalakshmi wines shop ನಲ್ಲಿ ಮಧ್ಯವನ್ನು ಖರೀದಿಸಲು ಚಾಸಾ 2 ರವರ ಜೊತೆ ಹೋಗಿರುತ್ತೇನೆ. ಆಗ ಚಾಸಾ 2 ರವರು ಕಾರಿನಲ್ಲಿ ಕುಳಿತಿದ್ದರು. ನನ್ನ ಹೆಂಡತಿಯನ್ನು ಆರೋಪಿಯು ಕಣ್ಣಿಗಳಿಂದ ನನ್ನ ಹೆಂಡತಿಯನ್ನು ನೋಡಿಕೊಂಡು ಸನ್ನೆಮಾಡಿಕೊಂಡು ಇದ್ದ. ಇದನ್ನು ನನ್ನ ಹೆಂಡತಿ ನನಗೆ ತಿಳಿಸಿ, ಕುಡುಕನಾಗಿರಬಹುದು ಎಂದು ಅದನ್ನು ನಿರ್ಲಕ್ಷಿಸಿದೆ. ನಂತರ Classic restaurant ನಲ್ಲಿ ಮನಗೆ ಊಟ ಪಾರ್ಸಲ್ ತೆಗೆದುಕೊಳ್ಳುತ್ತಿದ್ದಾಗ ಆರೋಪಿ ನಮ್ಮನ್ನು ಹಿಂಬಾಲಿಸಿಕೊಂಡು ಬಂದಿರುತ್ತಾನೆ. ನನ್ನ ಹೆಂಡತಿಯನ್ನು ಆರೋಪಿಯು ಬಾಯಿಯಿಂದ ಶಬ್ದದ ಮೂಲಕ ಕರಿಯುವ ರೀತಿ ಚೇಷ್ಟೆ ಮಾಡಿದ್ದನ್ನು ನಾನು ನೋಡಿದೆ. ಇದನ್ನು ಕೇಳಿದ್ದಕ್ಕೆ ಆರೋಪಿಯು ನನ್ನ ಆಗ ಉದ್ದಕ್ಕೆ ಇದ್ದ ನನ್ನ ಕೂದಲನ್ನು ಹಿಡಿದುಕೊಂಡು ಸುಮಾರು 2 ನಿಮಿಷಗಳ ಕಾಲ ಎಡಗೈ ನ ಹೆಬ್ಬೆರಳನ್ನು ಕಚ್ಚಿರುತ್ತಾನೆ. ಆರೋಪಿಯು ಅಲ್ಲೇ ಇದ್ದ ಕಲ್ಲಿನಿಂದ ಹೊಡದೆ ನನಗೆ ರಕ್ತ ಗಾಯಪಡಿಸಿದ. ಸಾರ್ವಜನಿಕರು ಜಗಳ ಬಿಡಿಸಿದರು, ನಾನು ಆಸ್ಪತ್ರೆಗೆ ಹೋಗಲು ಚಾಸಾ 3 ರವರನ್ನು ಕರೆಸಿ ಚಿಕಿತ್ಸೆ ಪಡೆದಿರುತ್ತೇನೆ. ನನ್ನ ಕತ್ತಿನ ಮೇಲೆ ಪರಿಚಿದ ಗಾಯಿಗಳಿದ್ದು ಈ ಗಲಾಟೆಯಲ್ಲಿ ನನಗೆ ಸೇರಿದ ಬಂಗಾರದ ಸರ ಕಳುವಾಗಿರುತ್ತದೆ. ಪೊಲೀಸರು ಆಸ್ಪತ್ರೆಗೆ ಬಂದು ಹೇಳಿಕೆ ಪಡೆದರು. ಸಾಕ್ಷಿಯು ಹೇಳಿಕೆಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ 1 ಎಂದು ಹಾಗೂ ಸಾಕ್ಷಿಯ ಸಹಿಯನ್ನು ನಿಪಿ 1(ಎ) ಎಂದು ಗುರುತಿಸಲಾಯಿತು.

ಪೊಲೀಸರಿಗೆ ಮರುದಿನ ನಾನು ಘಟನಾ ಸ್ಥಳಗಳನ್ನು ತೋರಿಸಿರುತ್ತೇನೆ. ಗಲಾಟೆ ಸ್ಥಳದಲ್ಲಿ ನನಗೆ ಹೊಡೆದ ಕಲ್ಲು ಪೊಲೀಸರಿಗೆ ಸಿಕ್ಕಿರುತ್ತದೆ. ಸ್ಥಳದಲ್ಲಿ ಪೊಲೀಸರು ಫೋಟೋ ತೆಗೆದರು. ಸಾಕ್ಷಿಯು ಮಹಜರ್ ಗಳನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ 2 ಮತ್ತು ನಿ. ಪಿ. 3 ಎಂದು ಹಾಗೂ ಸಾಕ್ಷಿಯ ಸಹಿಯನ್ನು ನಿಪಿ 2 (ಎ) ಮತ್ತು ನಿ. ಪಿ. 3(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ಕಲ್ಲನ್ನು ನೋಡಿ ಗುರುತಿಸಿದ್ದು ಅದನ್ನು ಮು. ಮಾ 1 ಎಂದು ಗುರುತಿಸಲಾಯಿತು. ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

(ಈ ಹಂತದಲ್ಲಿ ಸಾಕ್ಷಿಯು ತನ್ನ ಹೇಳಿಕೆಗೆ ಭಾಗಶಃ ಪ್ರತಿಕೂಲವಾಗಿ ಸಾಕ್ಷ್ಯ ನುಡಿಯುತ್ತಿರುವುದರಿಂದ, ಮಾನ್ಯ ಎಪಿಪಿರವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ನೀಡಲಾಯಿತು)

<u>ಪಾಟೀ ಸವಾಲುಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ-</u>

ಸಾಯಂಕಾಲ 05.30 ಸಮಯಕ್ಕೆ ಗೋಣಿಕೊಪ್ಪ By pass Jayalakshmi wines shop ಬಳಿ ನನ್ನ ಹೆಂಡತಿಗೆ ಆರೋಪಿ ತೊಂದರೆ ನೀಡಿರುತ್ತಾನೆ ಎಂದರೆ ಸರಿ. ಸಂಜೆ 07.30 ಸಮಯಕ್ಕೆ Classic restaurant ಬಳಿ ಗಲಾಟೆ ಅಗಿರುತ್ತದೆ. ಮು. ಮಾ 1 Classic restaurant ಬಳಿ ಅಮಾನತುಪಡಿಸಿಕೊಳ್ಳಲಾಯಿತು ಎಂದರೆ ಸರಿ. Classic restaurant ಬಳಿ ನಾನು ಆರೋಪಿಯನ್ನು ಚಾಸಾ 2 ನನ್ನ ಹೆಂಡತಿ ಎಂದು ಹೇಳಿದಾಗ, ಆದರೆ ಏನು ಎಂದು ಆರೋಪಿ ಹೇಳಿರುತ್ತಾನೆ ಎಂದರೆ ಸರಿ. ಮಹಜರ್ ಸಮಯದಲ್ಲಿ ತೆಗೆದ ಫೋಟೋಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ನಿ. ಪಿ. 4 ಮತ್ತು 5 ಎಂದು ಗುರುತಿಸಲಾಯಿತು.

<u>ಪಾಟೀ ಸವಾಲುಃ ಆರೋಪಿ ಪರ ಶ್ರೀಮತಿ ಸಿ. ಬಿ. ಎ ವಕೀಲರಿಂದಃ</u> ಆರೋಪಿ ಪರ ವಕೀಲರು ಪಾಟೀ ಸವಾಲಿಗೆ ಸಮಯವಕಾಶ ಕೋರಿದ್ದು, ಸಮಯ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚಿಸಿದೆ)

Sd/xxx-
ಸಿವಿಲ್ ನ್ಯಾಯಾಧೀಶರು, ಪೊನ್ನಂಪೇಟೆ.